**11 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು**

**ಸಿ.ಸಿ. ನಂಃ 59561-2016**

**ಪಿ.ಡಬ್ಲ್ಯೂ.ಯ. 2** ದಿನಾಂಕಃ **29.6.2023**

**ಸಿ.ಡಬ್ಲ್ಯೂ.ಯ. 1** ಪ್ರಮಾಣೀಕರಿಸಲಾಗಿದೆ

| | |
|---|---|
| ಹೆಸರು | ಬಿ ಪ್ರಮೋದ್ ಕುಮಾರ್ |
| ತಂದೆಯ ಹೆಸರು | ಅರಿಗಾ |
| ವಯಸ್ಸು | 48 ವರ್ಷ |
| ಉದ್ಯೋಗ | ಡಿವೈಎಸ್ಪಿ , ಸಕಲೇಶಪುರ ಉಪ ವಿಭಾಗ, ಹಾಸನ |
| ವಿಳಾಸ | ಹಾಸನ |

**ಮುಖ್ಯ ವಿಚಾರಣೆ ಹಿ.ಸ.ಸ.ಅ. ರವರಿಂದಃ**

ಜುಲೈ **2016** ರಿಂದ ಜನವರ **2018** ರವರೆಗೆ ಸಿಐಡಿ **6** ನೇ ಘಟಕ ಬೆಂಗಳೂರು ಇಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ **5.12.2016** ರಂದು ಮಧ್ಯಾಹ್ನ **3.30** ಗಂಟೆಗೆ ನಾನು ಕವೇರಿಯಲ್ಲಿದ್ದಾಗ ನಮ್ಮ ಪೊಲೀಸ್ ಉಪಾಧೀಕ್ಷರಿಗೆ ಬಂದ ಮಾಹಿತಿಯಾದ ಕೆಜಿ ಹಳ್ಳಿ ಪೊಲೀಸ್ ಠಾಣೆ ಸರಹದ್ದಿನ ಉಮರ್ ನಗರದಲ್ಲಿ ಯಾರೇ ಒಬ್ಬ ವ್ಯಕ್ತಿ ತನ್ನ ಮನೆಯಲ್ಲಿ ಜೀವಂತ ಗಿಳಿಗಳನ್ನು ಮಾರಾಟ ಮಾಡುತ್ತಿರುವುದಾಗಿ ತಿಳಿಸಿ ಮಾಹಿತಿಯನ್ನು ಖಚಿತ ಪಡಿಸಿಕೊಂಡು ದಾಳಿ ನಡಸಿ ಕ್ರಮ ಜರುಗಿಸುವಂತೆ ನನಗೆ ಸೂಚಿಸಿರುತ್ತಾರೆ . ಅದರಂತೆ ನಾನು ಮತ್ತು ಚಾಸಾ **4** ರಿಂದ **9** ರವರನ್ನು ಕರೆದುಕೊಂಡು ನಮ್ಮ ಖಾಸಗಿ ವಾಹನದಲ್ಲಿ ಸಂಜೆ **4.00** ಗಂಟೆಗೆ ಕವೇರಿಯನ್ನು ಬಿಟ್ಟು ಕೆಜಿ ಹಳ್ಳಿ ಸರಹದಿಐನ ನಿದ್ನಿ ಉಮರ್ ನಗರದ ಎಚ್.ಕೆ.ಬಿ.ಕೆ ಕಾಲೇಜಿನ  ಬಳಿ ಬಂದು ಅಲ್ಲಿ ಭಾತ್ಮಿದಾರರನ್ನು ಸಂಪರ್ಕಿಸಿ ಮಾಹಿತಿಯನ್ನು ಖಚಿತ ಪಡಿಸಿಕೊಂಡು ಚಾಸಾ **2** ಮತ್ತು **3** ರವರನ್ನು ಪಂಚರನ್ನಾಗಿ ಸ್ದಳದಲ್ಲಿ ಬರಮಾಡಿಕೊಂಡು ಅವರಿಗೆ ನಮಗೆ ಬಂದ ಮಾಹಿತಿ ಬಂದು ದಾಳಿಯ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೇಳಿದಾಗ ಅವರು ಅದಕ್ಕೆ ಒಪ್ಪಿ ಕೊಂಡಿರುತ್ತಾರೆ. ನಂತರ ನಾವು ಹಾಗೂ ಪಂಚರು ಉಮರ್ ನಗರದ **9** ನೇ ಎ ಕ್ರಾಸ್ ನಲ್ಲಿರುವ ಮನೆ ನಂಬರ್ **5** ರ **2** ನೇ ಮಹಡಿಗೆ ತೆರಳಿ

This is a True Copy of the Court Records Online. Authenticated @ districts.ecourtsindia.com/cnr/KABC0C0327832018/truecopy/order-2.pdf

ಪರಿಶೀಲಿಸಲಾಗಿ ಮನೆಯ ಒಳಭಾಗದ ಹೊರಾಂಡದಲ್ಲಿ ಕಬ್ಬಿಣದ ಕೇಹ್ ನಲ್ಲಿ ಮೂರು ಜೀವಂತ ಗಿಳಿಗಳಿದ್ದು ಆ ಮನೆಯಲ್ಲಿದ್ದ ಆಸಾಯಿಯ ಹೆಸರು ಮತ್ತು ಳವಿಳಾಸ ಕೇಳಾರಿ ಆತನು ಅಬ್ದುಲ್ ರೆಹಮಾನ್ ತಂದೆ ಮಹಕ್ಕಂ , 29 ವರ್ಷ , ಅದೇ ವಿಳಾಸ ಎಂದು ಮತ್ತು ಸ್ವಂತ ಊರು ನವಲಪಾಕಂ , ತಮಿಳುನಾಡು ಎಂದು ತಿಳಿಸಿರುತ್ತಾನೆ. ಅತನನಿಗೆ ಸದರಿ ಗಿಳಿಗಳನ್ನು ವಶದಲ್ಲಿಟ್ಟು ಕೊಳ್ಳಲು ಯಾವುದೇ ಪರವಾನಗಿ ಇದೆ ಎಂದು ಕೇಳಿದಾಗ ಆತನ ಯಾವುದೇ ಪರವಾನಗಿಯನ್ನು ಹಾಜರು ಪಡಿಸಿರುವುದಿಲ್ಲ. ಹಾಗೂ ಸದರಿ ಗಿಳಿಗಳನ್ನು ತನ್ನ ವಶಕ್ಕೆ ಹೇಗೆ ಪಡೆದಿದ್ದೀರಾ ಎಂದು ಕೇಳಿದಾಗ ಆತ ತನ್ನ ಸ್ವಂತ ಊರಿನಲ್ಲಿ ಯಾರೋ 6 ತಿಂಗಳ ಹಿಂದೆ ತನಗೆ ನೀಡಿದ್ದು ನನಗೆ ಹಣಕಾಸಿನ ತೊಂದರೆಯಿಂದ ಮಾರಾಟ ಮಾಡಲು ಇಟ್ಟುಕೊಂಡಿರುವುದಾಗಿ ಹೇಳಿದನು. ನಂತರ ಸದರಿ ಜೀವಂತ ಗಿಳಿಗಳನ್ನು ತನ್ನ ವಶದಲ್ಲಿ ಇಟ್ಟುಕೊಳ್ಳುವುದು ಮತ್ತು ಮಾರಾಟ ಮಾಡಲು ವನ್ಯ ಜೀವಿ ಸಂರಕ್ಷಣಾ ಕಾಯಿದೆ ಅಡಿಯಲ್ಲಿ ಅಪರಾಧವಾಗಿರುವುದರಿಂದ ಸದರಿ ಮೂರು ಜೀವಂತ ಗಿಳಿಗಳನ್ನು ಪಂಜರ , ಹಾಗೂ ಒಂದು ಕಾರ್ಬನ್ ಮೊಬೈಲ್ ಗಳನ್ನು ಪಂಚರ ಸಮಕ್ಷಮ ಸಂಜೆ 5.15-6.15 ರ ವರೆಗೆ ಮಹಜರ್ ಮೂಲಕ ವಶ ಪಡಿಸಿಕೊಂಡಿರುತ್ತೇನ. ಆ ವ್ಯಕ್ತಿಯನ್ನು ಮತ್ತು ಮಾಲುಗಳನ್ನು ವಶಕ್ಕೆ ಪಡೆದುಕೊಂಡು ವಿವರವಾದ ಪಂಚನಾಮೆಯನ್ನು ಜರುಗಿಸಿ ಪಂಚರ ಮತ್ತು ಆರೋಪಿಯ ಸಹಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿತನು ಆತನ ವಿರುದ್ಧ ವನ್ಯ ಜೀವಿ ಸಂರಕ್ಷಣಾ ಕಾಯಿದೆಯಿಡಿ ಪ್ರಕರಣ ದಾಖಲಿಸುವಂತೆ ಪ್ರವರದಿಯನ್ನು ತಯಾರಿಸಿ ಅಮಾನತ್ತು ಪಡಿಸಿಕೊಂಡು ಮುದ್ದೆಮಾಲುಗಳನ್ನು , ಆರೋಪಿ ಹಾಗೂ ಮಹಜರ್ ಸಹಿತ ಕೆಜೆ ಹಳ್ಳಿ ಪೊಲೀಸ್ ಠಾಣಾಧಿಕಾರಿಗೆ ಒಪ್ಪಿಸಿರುತ್ತೇನೆ.

ಪ್ರವರದಿಯನ್ನು ಈಗಾಗಲೇ ನಿಪಿ.1 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು. ಮಹಜರ್ ಅನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ.3 ಬಿ ಎಂದು ಗುರುತಿಸಲಾಯಿತು. ಆರೋಪಿಯ ಸಹಿ ನೋಡಿದ್ದು ಆರೋಪಿಯ ಸಹಿಯನ್ನು ನಿಪಿ.3 ಸಿ ಎಂದು, ಚಾಸಾ 4 ರಿಂದ 6 ರವರ ಸಹಿಗಳನ್ನು ನೋಡುತ್ತಿದ್ದು ನಿಪಿ.3 ಡಿ ಯಿಂದ ಎಫ್ ವರೆಗೆ ಕ್ರಮವಾಗಿ ಗುರುತಿಸಲಾಯಿತು. ಮೊಬೈಲ್ ಅನ್ನು ನೋಡಿದಲ್ಲಿ ಗುರುತಿಸುತ್ತೇನೆ. ಸದರಿ ಮೊಬೈಲ್ ಫೋನ್ ತನ್ನ ಮಧ್ಯಂತರ ವಶಕ್ಕೆ ಪಡೆದಿದ್ದು ಆ ಬಗ್ಗೆ ತಕರಾರು ಇಲ್ಲ .

This is a True Copy of the Court Records Online. Authenticated @ districts.ecourtsindia.com/cnr/KABC0C0327832018/truecopy/order-2.pdf

**ಪಾಟೀ ಸವಾಲು  ಆರೋಪಿ ಪರ ವಕೀಲರಿಂದಃ**

ನನಗೆ ಮಾಹಿತಿ ಬಂದು  ಎಂದು ಹೇಳಿದ್ದು ನಮ್ಮ ಕಚೇರಿಯಿಂದ ಭಾತ್ಮಿ ಸ್ಥಳಕ್ಕೆ ಸುಮಾರು 6-8 ಕಿಲೋಮೀಟರ್  ಅಂತರ ಇತ್ತು. ಮಧ್ಯಾಹ್ನ  3.30 ಕ್ಕೆ ಮಾಹಿತಿ ಬಂದಿರುತ್ತದೆ. ನಾವು 4.00 ಗಂಟೆಗೆ ಕವೇರಿ ಬಿಟ್ಟು  ಸಂಜೆ 4.30 ಕ್ಕೆ ಬಾತ್ಮಿ ಸ್ಥಳಕ್ಕೆ ಬಂದೆವು. ನಾನು ಹೇಳಿದ ಕೆಜೆ ಹಳ್ಳಿ ಪೊಲೀಸ್ ಠಾಣೆ ಬಾತ್ಮಿ ಜಾಗಕ್ಕೆ ಬರಬೇಕಾದರೆ ಕನಿಷ್ಟ 45 ನಿಮಿಷ ಟ್ರಾಫಿಕ್ ಜಾಮ ಬರಲು ಸಮಯ ಆಗುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ  ಟ್ರಾಫಿಕ್ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ರಸ್ತೆ ಕೇವಲ 30 ಅಡಿಗಳ ರಸ್ತೆ ಎಂದರೆ ಪ್ರೇಜರ್ ಟೌನ್ ವರಗೆ ಟಬಲ್ ರಸ್ತೆ ಇದ್ದು ಅದರಿಂದ ಮುಂದೆ 40 ಅಡಿ ರಸ್ತೆ ಇದೆ ಎಂದು ನುಡಿಯುತ್ತಾರೆ. ಪ್ರೇಜರ್ ಟೌನ್ - ಪುಲಿಕೆಶಿನಗರ ಬಳಿ ಎರಡು ಅಂಡರ್ ಪಾಸ್ ಇದ್ದು ಒಂದು ಅಂಡರ್ ಪಾಸ್ ನಲ್ಲಿ ಎರಡು ವಾಹನಗಳು ಒಟ್ಟಿಗೆ ಹೋಗಲು ಆಗುವುದಿಲ್ಲ ಎಂದರೆ ಸರಿಯಲ್ಲ. ಕೆಜೆ ಹಳ್ಳಿ ಪೊಲೀಸ್ ಠಾಣೆ ಬಿಡುವ ಪೂರ್ವದಲ್ಲಿ ನಾವು ಬೇರೆ ಯಾರಿಗೆ ಮಾಹಿತಿ ಕೊಟ್ಟು ಬಂದಿರುವುದಿಲ್ಲ. ನೇರವಾಗಿ ಸ್ಥಳಕ್ಕೆ ಹೋಗಿ ದಾಳಿ ನಡೆಸಿರುತ್ತೇವೆ. ನಾವು ಖಾಸಗಿ ವಾಹನ ಎಂದು ಹೇಳಿದ್ದು ವಾಹನದ ನೊಂದಣಿ ಸಂಖ್ಯೆ ನಿಪಿ.1 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ . ನಾನು ಹೇಳಿದ ಮನೆಯ ಪೋಟೊ ತೆಗೆದಿಲ್ಲ. ಆ ಮನೆಯ ಬಣ್ಣ  ಮತ್ತು ಅದು ಯಾವ ರೀತಿ ಇತ್ತು ಎಂದು ನಿಪಿ.1 ರಲ್ಲಿ ಕಾಣಿಸಿಲ್ಲ. ಕೆಳಗಿನ ಮನೆಯಲ್ಲಿ ಯಾರು ಇದ್ದರೂ ಎಂದು ನಾನು ಆ ಸಮಯದಲ್ಲಿ ವಿಚಾರಿಸಿಲ್ಲ.

ಭಾತ್ಮಿದಾರರ ಮಾಹಿತಿಯನ್ನು ಆದಾರಿಸಿ ನೇರವಾಗಿ 2 ನೆ ಮಹಡಿಗೆ ಹೋಗಿರುತ್ತೇವೆ. ಕೇಜ್ ನ ಬಣ್ಣ ಕಾಣಿಸಿಲ್ಲ ಎಂದರೆ ಸರಿ. ಮೂರು ಗಿಳಿಗಳು ಎಂದು ಹೇಳಿದ್ದು ಅದರ ಬಣ್ಣ ಮತ್ತು ಯಾವ ಜಾತಿಯ ಗಿಳಿ ಎಂದು ಕಾಣಿಸಿಲ್ಲ ಎಂದರೆ ಸರಿ . ನಿಪಿ.1 ರ ದೂರು ಬೆರಳಚ್ಚು ಮಾಡಿದ್ದು ಅದನ್ನು ಯಾವ ಮೂಲಕ ಬೆರಳಚ್ಚು ಮಾಡಿಸಿದೆ ಎಂದು ಕಾಣಿಸಿಲ್ಲ ಎಂದರೆ ಸರಿ . ಆರೋಪಿ ಮನೆಯಿಂದ ಪೊಲೀಸ್ ಠಾಣೆಗೆ ಒಂದು ಕಿಲೋಮೀಟರ್ ಇರಬಹುದು. ನಾನು ಹೇಳಿದ ಮೇರೆಗೆ ನನ್ನ ಸಿಬ್ಬಂದಿ ಮಹಜರ್

This is a True Copy of the Court Records Online. Authenticated @ districts.ecourtsindia.com/cnr/KABC0C0327832018/truecopy/order-2.pdf

www.ecourtsindia.com

ತಯಾರಿಸಿರುತ್ತಾರೆ. ಮಹಜರ್ ನಲ್ಲಿ ಕೂಡ ಗಿಳಿಯ ಬಣ್ಣ , ಪಂಜರದ ಬಣ್ಣ ಎಲ್ಲಿಯೂ ಕಾಣಿಸಿಲ್ಲ ಎಂದರೆ ಸರಿ . ನಿಪಿ.3 ರಲ್ಲಿ ಸಂಜೆ 4.30 ಎಂಬ ಜಾಗ ತಿದ್ದು ಪಡಿಯಾಗಿದೆ ಎನ್ನುವುದು ಸರಿಯಲ್ಲ. ದ್ವಿಚಕ್ರವಾಹನದಲ್ಲಿ ಹೋಗಿದ್ದೆ ಎಂದು ಕಾಣಿಸಿದ್ದು ಯಾವುದೆ ದ್ವಿಚಕ್ರವಾಹನದ ನೊಂದಣಿ ಸಂಖ್ಯೆ ಕಾಣಿಸಿಲ್ಲ ಎಂದರೆ ಸರಿ .

ಕಾರ್ಬನ್ ಮೊಬೈಲ್ ವಶಪಡಿಸಿಕೊಂಡಿದ್ದೇವೆ ಎಂದು ಹೇಳಿದ್ದು ಅದು ಕೀ ಪ್ಯಾಡ್ ಅಥವಾ ಹ್ಯಾಂಡ್ ರಾಯಡ ಎಂದು ಕಾಣಿಸಿಲ್ಲ ಎಂದರೆ ಸರಿ ಆದರೆ ಮೊಬೈಲ್ ಸಿಂ ಮತ್ತು ಕಂಪನಿಯನ್ನು ಕಾಣಿಸಿದ್ದೇವೆ ಎಂದು ನುಡಿಯುತ್ತಾರ. ಐಎಂಇ ನಂಬರ್ ಕಾಣಿಸಿಲ್ಲ ಎದಂರೆ ಸರಿ .

ಒಬ್ಬ ವ್ಯಕ್ತಿಯ ಮನೆಗೆ ದಾಳಿ ಮಾಡಿ ಆತನ ಬಳಿ ಮಾಹಿತಿ ಕಳೆ ಹಾಕಲು ಕನಿಷ್ಠ ½ ಗಂಟೆ ಬೇಕು ಎಂದರೆ ಸರಿಯಲ್ಲ. ಮಹಜರ್ ಅನ್ನು ಹೊನ್ನೆಗೌಡ ಎಂಬುವವರು ಬರೆದಿದ್ದಾಗಿ ಸಹಿ ಕೂಡ ಮಾಡಿದ್ದಾರೆ. ನಾನು ಒಂದು ವೇಳೆ ಕೇಜ್ ಮತ್ತು ಗಿಳಿಗಳನ್ನು ಸೀಜ್ ಮಾಡಿದ್ದಲ್ಲಿ ಪೋಟೋ ತೆಗೆಯಬೇಕಾಗಿತ್ತು ಆದ್ದರಿಂದ ನಾವು ಸ್ಥಳದಲ್ಲಿ ಯಾವುದೇ ಸೀಜ್ ಮಾಡಿಲ್ಲ ಎಂದರೆ ಸರಿಯಲ್ಲ.

ನಾನು ಹೇಳಿದಂತೆ ಯಾವುದೇ ಜೀವಂತ ಗಿಳಿಗಳನ್ನು ಆರೇಪಿ ಮನೆಯಿಂದ ನಾನು ಹೇಳಿದಂತೆ ನಾನು ಸೀಜ್ ಮಾಡಿಲ್ಲ ಅದೇ ರೀತಿ ಪಂಜರವನ್ನು ಸೀಜ್ ಮಾಡಿಲ್ಲ, ಸ್ಥಳದಲ್ಲಿ ಮಹಜರ್ ಕೂಡ ಮಾಡಿಲ್ಲ . ಆರೇಪಿಯ ವಿರುದ್ದ ಒಂದು ಸುಳ್ಳು ಕೇಳು ಮಾಡಿ , ಅಂಕಿ ಅಂಶಗೋಸ್ಕರ ಒಂದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಕೇವಲ ಮೂರು ಗಿಳಿಗಳು ಮತ್ತು ತಮಿಳುನಾಡಿನ ವ್ಯಕ್ತಿ ಆರೇಪಿಗೆ ಮಾರಾಟ ಮಾಡಿದ ವ್ಯಕ್ತಿಯ ಹೆಸರು ಮತ್ತು ವಿಳಾಸ ಗೊತ್ತಿಲ್ಲ. ಒಂದು ವೇಳೆ ಆರೇಪಿ ಮಾರಾಟ ಮಾಡಲು ಗಿಳಿಗಳನ್ನು ವಶದಲ್ಲಿಟ್ಟು ಕೊಂಡಿದ್ದ ಪಕ್ಷದಲ್ಲಿ ಬೇರೆ ಪಕ್ಷಿ ಮತ್ತು ಗಿಳಿಗಳು ಇರುತ್ತಿದ್ದವು ಆಗಾಗಿ ನಾನು ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಮಹಹರ್ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎದರೆ ಸರಿಯಲ್ಲ. ಬೇರೆ ಯಾರಿಗೆ ಆರೋಪಿ ಬೇರೆ ಗಿಳಿಗಳನ್ನು ಮಾರಾಟ ಮಾಡಿದ ಮಾಹಿತಿ ಆರೋಪಿ ಮಾಹಿತಿ ನೀಡಿಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC0C0327832018/truecopy/order-2.pdf

**<u>ಮರು ವಿಚಾರಣೆಃ ಇಲ್ಲ</u>**

*(**Dictated to the typist in open court and typed by the typist, and printout taken and corrected and readover to the witness and admitted by the witness as true and correct**)*

11 ನೇ ಎ.ಸಿ.ಎಂ.ಎಂ.
ಬೆಂಗಳೂರು.

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KABC0C0327832018/truecopy/order-2.pdf